

ಗ್ರಾಮೀಣ ಪ್ರದೇಶದ ಬಹುತೇಕ ಮಹಿಳೆಯರಿಗೆ ಗೃಹಬಳಕೆಗೆ ನೀರನ್ನು ಹೊಂಚುವುದು ಅನುದಿನದ ಅಗ್ನಿಪರೀಕ್ಷೆ

ಇಂಗುವ ಮಳೆಯ ನೀರು ನೆಲದಾಳದಲ್ಲಿ ಒಂದೆರಡು ಅಡಿಯಿಂದ ಸಾವಿರಾರು ಅಡಿ ಆಳದವರೆಗೆ ಸಂಗ್ರಹವಾಗಿರುತ್ತದೆ. ಒಂದು ಕಾಲದಲ್ಲಿ ಹಳ್ಳಗಳ ಅಥವಾ ನದಿಗಳ ಪಾತ್ರದಲ್ಲಿ ಒಂದು ಅಡಿ ಮರಳನ್ನು ಬಗೆದಿದ್ದರೆ ಬೊಗಸೆ ತುಂಬುವಷ್ಟು ನೀರನ್ನು ಪಡೆಯಬಹುದಿತ್ತು. ಸೇದು ಬಾವಿ ಮತ್ತು ತೋಡು ಗುಂಡಿಗಳಲ್ಲಿ ನೆಲದಾಳದ ನೀರು ಕೈಗೆ ಎಟಕುತ್ತಿತ್ತು. ಅಂತರ್ಜಲ ನೆಲದೊಳಗೆ ಜಾರಿದಂತೆ ರಾಟೆ ಅಳವಡಿಸಿ ಹಗ್ಗಕ್ಕೆ ಬಿಂದಿಗೆ, ಬಕೆಟ್ ಕಟ್ಟಿ ನೀರನ್ನು ಮೇಲಕ್ಕೆ ಎಳೆದುಕೊಳ್ಳಬೇಕಿತ್ತು. ಬಾವಿಗಳ ದಡದ ಮಣ್ಣು ಕುಸಿಯದಂತೆ ಸುತ್ತಲೂ ಅವರವರಿಗೆ ಇಷ್ಟದಂತೆ ಕಲ್ಲಿನ ಗೋಡೆ ಕಟ್ಟುತ್ತಿದ್ದರು. ಈಗಲೂ ಜಲಧರ ಪ್ರದೇಶಗಳಲ್ಲಿ ಆಳದ ತೋಡು ಬಾವಿ ತೆಗೆದು ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಕಲ್ಲಿನಿಂದ ಸುತ್ತಲೂ ಭದ್ರಪಡಿಸುವವರಿದ್ದಾರೆ.

ವ್ಯವಸಾಯಕ್ಕೆ ಮತ್ತು ಕುಡಿಯಲು ತೋಡು ಬಾವಿಗಳೇ ಗಣನೀಯವಾಗಿ ಕಂಡುಬರುತ್ತಿದ್ದವು. ಕುಡಿಯುವ ಶುದ್ಧ ನೀರಿಗೆ ತೋಡು ಬಾವಿಗಳೇ ಆಧಾರವಾಗಿದ್ದವು. ಕಪಿಲೆ ಬಾವಿಗಳು ಒಂದು ಅಥವಾ ಎರಡು ಎತ್ತುಗಳನ್ನು ಹೂಡಿ ಬಾವಿಯಿಂದ ನೀರನ್ನು ಮೊಗೆಯುವ ಕ್ರಮ. ಈ ಪದ್ಧತಿಯಲ್ಲಿ ಜಲಮಟ್ಟ ಬಹಳ ಆಳ ಇರುತ್ತಿರಲಿಲ್ಲ. ಹತ್ತಾರು ಬಿಂದಿಗೆ ತುಂಬಬಹುದಾದ ಚರ್ಮದ ಚೀಲಗಳನ್ನು ನೀರಿನಲ್ಲಿ ಮುಳುಗಿಸಿ ಎತ್ತುಗಳ ಸಹಾಯದಿಂದ ಮೇಲಕ್ಕೆ ಎಳೆಯಲಾಗುತ್ತಿತ್ತು. ಸಣ್ಣ ಹಿಡುವಳಿದಾರ ಬೇಸಾಯಕ್ಕೆ ಕಪಿಲೆ ಬಾವಿಗಳು ಜಲ ಸಂಜೀವಿನಿ ಆಗಿದ್ದವು. ಕಪಿಲೆ ಬಾವಿಗಳಂತೆ 'ಪರ್ಷಿಯನ್ ವೀಲ್ಸ್' ಮತ್ತೊಂದು ವಿಧಾನ. ಕಪಿಲೆ ಬಾವಿಗಳಲ್ಲಿ ಬಳಸುವಂತೆ ಚರ್ಮದ ಚೀಲ ಬಳಸದೆ ತಗಡಿನ ಹದಿನೈದಿಪ್ಪತ್ತು ಪೆಟ್ಟಿಗೆ ಅಥವಾ ಬಕೆಟ್‌ಗಳನ್ನು ಒಂದು ದೊಡ್ಡ ಚಕ್ರಕ್ಕೆ ತೂಗುಹಾಕಿ ನೀರಿನಲ್ಲಿ



ಬರಿಗೊಡಗಳಿಗೆ ಸಮಾಧಾನ ಹೇಳುತಿದೆ
ನೀರಿಲ್ಲದ ನಲ್ಲಿ
ಮಟ ಮಟ ಮಧ್ಯಾಹ್ನದಲ್ಲಿ!
—ಕೆ.ಎಸ್. ನರಸಿಂಹಸ್ವಾಮಿ

ಚಿತ್ರ: ಪ್ರಕಾಶ ಕಂದಕೂರ